# ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

ಸಿ.ಸಿ. ನಂ.1709/2024

| | | |
|---|---|---|
| ಸಾಕ್ಷಿದಾರರ ಹೆಸರು | ಕಿಶೋರ್ ಸಿಂಗ್ | ಸಿ.ಡಬ್ಲ್ಯು–2 |
| ತಂದೆಯ ಹೆಸರು | ಸುರೇಂದ್ರ ಸಿಂಗ್ | ಪಿ .ಡಬ್ಲ್ಯೂ–4 |
| ವಯಸ್ಸು | 31 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಆಟೋ ಚಾಲಕ | ದಿನಾಂಕಃ |
| ವಾಸಃ | ಜನ್ನತ್ ನಗರ, ಸಾಗರ | 22.04.2026 |

**ಮುಖ್ಯ ವಿಚಾರಣೆಃ ಸಸಅ ರವರಿಂದಃ**

**1.** ನಿಪಿ–6 ಮತ್ತು 7 ರಲ್ಲಿನ ತನ್ನ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದರಿ ಸಹಿಗಳನ್ನು ನಿಪಿ–6(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ–2 ರ ಫೋಟೋವನ್ನು ನೋಡಿ ಗುರುತಿಸಿರುತ್ತಾರೆ. ದಿನಾಂಕ 05.01.2024 ರ ನೋಟೀಸ್ ಅನ್ನು ನಿಪಿ–8 ಎಂದು, ಸಾಕ್ಷಿಯ ಸಹಿಯನ್ನು ನಿಪಿ–8(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ದಿನಾಂಕ 05.01.2024 ರಂದು ಸಾಗರದ ಜನತಾ ಸ್ಕೂಲ್ ನ ಎದುರಿಗೆ ಇರುವ ಚಾ.ಸಾ 1 ರವರ ಜಾಗದಲ್ಲಿ ಗಲಾಟೆ ಸಂಬಂಧ ಮಾಡಿದ ಮಹಜರಿನ ಕಾಲಕ್ಕೆ ಮಾಡಿದ್ದೇನೆ. ಆಗ ನಾನು, ಚಾ.ಸಾ 1 ಮತ್ತು ಚಾ.ಸಾ 3 ರವರು ಹಾಜರಿದ್ದೆವು.

**ಪಾಟೀ ಸವಾಲುಃ ಆರೋಪಿತನ ಪರ ವಕೀಲರಾದ ಶ್ರೀ. ಐ.ಬಿ.ಎಂ ರವರಿಂದಃ–**

**1.** ಘಟನಾ ಸ್ಥಳದಿಂದ ನಮ್ಮ ಮನೆ 1 ಕಿ.ಮೀ ದೂರದಲ್ಲಿ ಹಾಗೂ ಚಾ.ಸಾ 3 ರವರ ಮನೆ 2 ಕಿ.ಮೀ ದೂರದಲ್ಲಿ ಇವೆ. ಚಾ.ಸಾ 1 ನನ್ನ ಆಟೋದಲ್ಲಿ ಆಗಾಗ ಓಡಾಡುತ್ತಾರೆ. ಚಾ.ಸಾ 4 ರವರು ನನಗೆ ಪರಿಚಯವಿದ್ದಾರೆ. ಚಾ.ಸಾ 3 ರವರು ನನಗೆ ಪರಿಚಯಸ್ಥನಲ್ಲ. ಪಂಚನಾಮೆಗೆ ನನ್ನನ್ನು ಪೋಲಿಸರು ಫೋನ್ ಮಾಡಿ ಕರೆದರು. ಪೋಲಿಸರು ನನ್ನನ್ನು ಕರೆದ ದಿನಾಂಕ ಈಗ ನನಗೆ ನೆನಪಿಲ್ಲ. ದಿನಾಂಕ 05.01.2024 ರಂದು ಪಂಚನಾಮೆ ಮಾಡಿದ 3 ದಿನಗಳ ಹಿಂದೆ ಈ ಘಟನೆ ನಡೆದಿದೆ. ಪೋಲಿಸರು ನನಗೆ ನೋಟೀಸ್ ಅನ್ನು ಕೊಟ್ಟಿದ್ದರು. ಈ ಘಟನೆಯ ವಿಚಾರವಾಗಿ ನಾನು ಪೋಲಿಸ್ ಠಾಣೆಗೆ ಯಾವತ್ತೂ ಹೋಗಿಲ್ಲ. ಮಹಜರ್ ಮಾಡಿದಾಗ ನಾನು, ಚಾ.ಸಾ 3 ಮತ್ತು 4 ಹಾಗೂ ಪೋಲಿಸರು

ಇದ್ದೆವು.  ಮಹಜರನ್ನು ಪೋಲಿಸರು ಹೇಳಿ ಬರೆಸಿದರು. ಮಹಜರನ್ನು ಪೋಲಿಸರು ಬರೆದಿದ್ದು, ಅವರಿಗೆ ಕೋರಿಕೆ ಮೇರೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮುಂದುವರೆದು ಮಹಜರಿನಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿದೆ ಎನ್ನುತ್ತಾರೆ. ಮಧ್ಯಾಹ್ನ ಸುಮಾರು 01.30-02.00 ಗಂಟೆಗೆ ಮಹಜರ್ ಕ್ರಮ ಜರುಗಿಸಿದ್ದಾರೆ. ಚಾ.ಸಾ 1 ರವರು ಈ ಕೇಸಿನ ಫಿರ್ಯಾದುದಾರರು. ನಿಪಿ-6 ರಲ್ಲಿ ಪ್ರಕರಣದ ಫಿರ್ಯಾದಿ ಪ್ರದೀಪ ಎಂದು ಬರೆದಿದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಪ್ರಕಾರ ಚಾ.ಸಾ 1 ರವರೇ ಈ ಕೇಸಿನ ದೂರುದಾರರು. ವಿವಾದಿತ ಜಾಗದ ಸರ್ವೇ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ಮಹಜರಿನಲ್ಲಿ ಬರೆದಿರುವ ವಿಷಯಗಳನ್ನು ಪೋಲಿಸರೇ ಹೇಳಿದರು. ಪೋಲಿಸರು ಜನತಾ ಸ್ಕೂಲ್ ನ ಹತ್ತಿರ ಬರುವಂತೆ ನನಗೆ ಹೇಳಿದರು. ನಾನು ಹೋದಾಗ ಅವರು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋದರು. ಚಾ.ಸಾ 1 ಮತ್ತು ಆರೋಪಿತನ ನಡುವೆ ಆದ ಸಿವಿಲ್ ವ್ಯಾಜ್ಯದ ಬಗ್ಗೆ ನನಗೆ ಮಾಹಿತಿ ಇಲ್ಲ.

**2.** ಘಟನಾ ಸ್ಥಳದ ದಕ್ಷಿಣಕ್ಕೆ ತೋಟ ಮತ್ತು ಒಂದು ಮನೆ ಇದೆ. ಆ ಜಾಗದ ಮಾಲೀಕರ ಹೆಸರು ನನಗೆ ಗೊತ್ತಿಲ್ಲ. ಮಹಜರನ್ನು ಕೈ ಬರಹದಲ್ಲಿಯೇ ಬರೆದಿದ್ದಾರೆ. ಮಹಜರನ್ನು ಪುರುಷ ಪೋಲಿಸ್ ಅಧಿಕಾರಿಗಳು ಬರೆದರು. ಕೈಬರಹದ ಪಂಚನಾಮೆಗೆ ನಾನು ಎಲ್ಲಿಯೂ ಸಹಿ ಮಾಡಿಲ್ಲ ಎಂದರೆ ಸರಿ ಮುಂದುವರೆದು ಸಾಕ್ಷಿಯು ಕೈ ಬರಹದ ನಕ್ಷೆಗೆ ನಾನು ಸಹಿ ಮಾಡಿದ್ದೇನೆ ಎನ್ನುತ್ತಾರೆ. ಪೋಲಿಸರು ಈ ದಿನ ನನ್ನನ್ನು ಸಾಕ್ಷಿ ನುಡಿಯಲು ಕರೆದಿದ್ದಾರೆ. ಯಾವ ಸರ್ವೇ ನಂಬರ್ ನಂಬರ್ ಜಮೀನಿನಲ್ಲಿ ನಿಪಿ-2 ರ ಫೋಟೋ ತೆಗೆದರು ಎಂದು ನನಗೆ ಗೊತ್ತಿಲ್ಲ.  ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ ಮತ್ತು ಯಾವುದೇ ಪಂಚನಾಮೆಗೆ ಸಹಿ ಮಾಡಿಲ್ಲ ಎನ್ನುವುದು ಸರಿಯಲ್ಲ. ಚಾ.ಸಾ 1 ಮತ್ತು 4 ರವರ ಸುಳ್ಳು ದೂರಿಗೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಘಟನೆಗೂ ಮತ್ತು ಆರೋಪಿತನಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು, ಸಾಗರ.